(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)
<u>ಪಾಟೀ ಸವಾಲುಃ ಶ್ರೀ ಎಲ್.ಎಂ, 1 ನೇ ಎದುರುದಾರ ಪರ ವಕೀಲರಿಂದ</u>

1 ನೇ ಎದುರುದಾರರು 2015 ನೇ ಸಾಲಿನಲ್ಲಿ ನನ್ನ ವಿರುದ್ಧ ಹಾಗೂ ಇತರರ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಅಸಲು ದಾವೆ ಸಂಖ್ಯೆ-285/2015 ರಲ್ಲಿ ನಾವು ವಕೀಲರನ್ನು ನೇಮಿಸಿಕೊಂಡಿದ್ದೆವು ಎಂದರೆ ಸರಿ.

ದಿ:12.02.2018 ರಂದು ಅಸಲು ದಾವೆ ಸಂಖ್ಯೆ-285/2015 ರಲ್ಲಿ ಹೊರಡಿಸಿದ ತೀರ್ಪಿನ ದಿನಾಂಕ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಕಳೆನ್ಯಾಯಾಲಯದ ಆದೇಶದ ನಂತರ 1 ನೇ ಎದುರುದಾರರು ನನ್ನ ಹಾಗೂ ಇತರರ ವಿರುದ್ಧ ಕೋಡಿಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಎದುರುದಾರರು ನಮ್ಮಗಳ ವಿರುದ್ಧ ಅಮಲ್ಜಾರಿ ಪ್ರಕರಣವನ್ನು ಹೂಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಪೊಲೀಸರು ನಮ್ಮ ಮನೆ ಬಳಿ ಬಂದಾಗ ತಿಳಿದುಬಂದಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಅಮಲ್ಜಾರಿ ಪ್ರಕರಣದಲ್ಲಿ ವಕೀಲರನ್ನು ನೇಮಿಸಿಕೊಂಡಿರುತ್ತೇವೆ ಎಂದರೆ ಸರಿ. ನನಗೆ ಕೆಳ ನ್ಯಾಯಾಲಯವು ಹೊರಡಿಸಿದ ತೀರ್ಪಿನ ದಿನಾಂಕ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಕಾರಣಗಳನ್ನು ತೋರಿಸಿ ಕಾಲ ವಿಳಂಬ ಮನ್ನಾ ಮಾಡಲು ಅರ್ಜಿಯನ್ನು ಸಲ್ಲಿಸಿ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಿ:12.02.2018 ರಂದು ಆದ ತೀರ್ಪಿನ ಬಗ್ಗೆ ತಿಳಿದಿದ್ದರೂ ಸಹ ಅಮಲ್ಜಾರಿ ನೋಟೀಸ್ ಬಂದ ನಂತರ ತಿಳಿದುಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಕಾಲ ವಿಳಂಬ ಮನ್ನಾ ಮಾಡಲು ಯಾವುದೇ ಸಕಾರಣಗಣನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

"

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.